MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | SATURDAY | 18-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಾಂಬೋಡಿಯಾದಿಂದ ಗೋಡಂಬಿ ರಫ್ತು 40 ರಿಂದ 50 ಶೇಕಡಾ ಇಳಿಕೆ

ಕಾಂಬೋಡಿಯಾ ಸುಮಾರು 4 ಲಕ್ಷ ಟನ್‌ಗಳಷ್ಟು ಕಚ್ಚಾ ಗೋಡಂಬಿ ರಫ್ತು ಮಾಡಿದೆಯೆನ್ನಲಾಗಿದ್ದು ಹಿಂದಿನ ಸೀಜನ್‌ನ (ಜನವರಿಯಿಂದ ಮೇ) ಇದೇ ಅವಧಿಗಿಂತ 50 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. 95 ಶೇಕಡಾ ಕಚ್ಚಾ ಗೋಡಂಬಿಯನ್ನು ವಿಯೆಟ್ನಾಂಗೆ ರಫ್ತು ಮಾಡಿದೆಯೆನ್ನಲಾಗಿದೆ.

## ಸ್ಥಗಿತಗೊಂಡ ಖಾಸಗಿ ಗೋಡಂಬಿ ಕಾರ್ಖಾನೆಗಳನ್ನು ಕೇರಳ ಸರಕಾರ ನಡೆಸುವ ಯೋಜನೆ

ಕೇರಳದಲ್ಲಿ ನಿರ್ಧಿಷ್ಠ ಕಾರಣವಿಲ್ಲದೆ ಸ್ಥಗಿತಗೊಂಡ ಖಾಸಗಿ ಗೋಡಂಬಿ ಕಾರ್ಖಾನೆಗಳನ್ನು ಕೇರಳ ಸರಕಾರ ಪಡೆದುಕೊಂಡು ಕಾರ್ಖಾನೆ ನಡೆಸಲಿದೆಯೆನ್ನಲಾಗಿದೆ. ಕಾಶ್ಯೂ ಕಾರ್ಪೋರೇಶನ್‌ನ ಪುನರುಜ್ಜೀವನಕ್ಕೆ ಯೋಜನೆ ಮಾಡಲಾಗಿದೆಯೆನ್ನಲಾಗಿದೆ.

## ಸತತ ಮೂರನೇ ದಿನ ಕುಸಿತ ಕಂಡ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ

ಸತತ ಮೂರನೇ ದಿನ ಕುಸಿತ ಕಂಡ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಈ ವಾರ ಒಟ್ಟು 8 ಶೇಕಡಾ ಕ್ಕಿಂತಲೂ ಹೆಚ್ಚು ದರ ಇಳಿಕೆಯಾಗಿದೆ. ಇಂಡೋನೇಶೀಯಾದಿಂದ ರಫ್ತು ಹೆಚ್ಚಳ ಮತ್ತು ಮಲೇಶಿಯಾದಿಂದ ರಫ್ತು ಇಳಿಕೆಯಾಗುವ ನಿರೀಕ್ಷೆಯಿಂದ ಮಲೇಶಿಯನ್ ಪಾಮೆಣ್ಣೆ ದರ ಕುಸಿತವಾಗಲಿದೆಯೆನ್ನಲಾಗಿದೆ. ಇಂಡೋನೇಶಿಯಾ ಸರಕಾರ 820,000ಟನ್ ಪಾಮೆಣ್ಣೆ ರಫ್ತಿಗೆ ಆಂತರಿಕ ಮಾರುಕಟ್ಟೆ ಪೂರೈಕೆ ಯೋಜನೆಯನ್ವಯ ಅನುಮತಿ ನೀಡಿದೆಯೆನ್ನಲಾಗಿದೆ.

## ದಾವಣಗೆರೆ ಮಾರುಕಟ್ಟೆಯಲ್ಲಿ ಜೋಳ ದರ ಹೆಚ್ಚಳ

ದಾವಣಗೆರೆ ಮಾರುಕಟ್ಟೆಯಲ್ಲಿ ಪೌಲ್ಟ್ರಿ ಫೀಡ್ ತಯಾರಕರಿಂದ ಪ್ರಬಲ ಬೇಡಿಕೆಯಿಂದ ಜೋಳ ದರ ಹೆಚ್ಚಳವಾಯಿತು. ಆವಕ 1000 ಚೀಲಗಳೆನ್ನಲಾಗಿದೆ. ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ಜೋಳ ದರ ಸ್ಥಿರವಿದ್ದು ಆವಕ ಹೆಚ್ಚಳವಾಗಿದೆ. (60000 ಚೀಲಗಳಿಂದ 75000 ಚೀಲಗಳಿಗೆ) ಗೋಧಿ ದರ ದೇಶೀ ಮಾರುಕಟ್ಟೆಯಲ್ಲಿ ಸ್ಥಿರವಾಗಿದೆ.

## ಚಿಕಾಗೋ ಸೋಯಾಬೀನ್ ಫ್ಯೂಚರ್ ದರ ಹೆಚ್ಚಳ

4 ದಿನಗಳ ಸತತ ದರ ಇಳಿಕೆಯ ನಂತರ ಚಿಕಾಗೋ ಸೋಯಾಬೀನ್ ದರ ಗುರುವಾರ ಪ್ರಥಮ ಬಾರಿಗೆ ಹೆಚ್ಚಳ ಕಂಡಿದೆ. 0.8 ಶೇಕಡಾ ದರ ಹೆಚ್ಚಳವಾಗಿದೆ. ಮಧ್ಯ ಪಶ್ಚಿಮ ರಾಷ್ಟ್ರಗಳಲ್ಲಿ ಒಣ ಹವೆ ಮುಂದುವರಿದಿದ್ದು ಉತ್ಪಾದನೆಯ ಮೇಲೆ ಪರಿಣಾಮ ಬೀರಬಹುದಾಗಿದೆ.

## ಮುಂದಿನ ಸೀಸನ್‌ಗೆ 8 ಮಿಲಿಯನ್ ಟನ್ ಸಕ್ಕರೆ OGL ಯನ್ವಯ ರಫ್ತು ಅನುಮತಿಗೆ ಮನವಿ

ISMA ಮುಂದಿನ ಸೀಸನ್‌ಗೆ 8 ಮಿಲಿಯನ್ ಟನ್ ಸಕ್ಕರೆ ರಫ್ತು ಮಾಡಲು OGL ಅನ್ವಯ ಅನುಮತಿ ನೀಡಬೇಕು ಹಾಗೂ OGL ರಫ್ತು ಕೋಟಾ ಶೀಘ್ರ ಘೋಷಿಸಬೇಕೆಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದೆಯೆನ್ನಲಾಗಿದೆ. ಈ ವರ್ಷ ಕಬ್ಬು ನಾಟಿ 2 ಶೇಕಡಾ ಹೆಚ್ಚು ಪ್ರದೇಶದಲ್ಲಿ ಆಗಬಹುದು ಹಾಗೂ ಉತ್ಪಾದನೆ ಹಿಂದಿನ ಸೀಸನ್‌ಗಿಂತ ಹೆಚ್ಚಳವಾಗಬಹುದೆಂದು ನಿರೀಕ್ಷೆ ಹೊಂದಿದೆ. ಸಾಕಷ್ಟು ಹೆಚ್ಚುವರಿ ಸಕ್ಕರೆ ಉತ್ಪಾದನೆಯಾಗುವ ಸಾಧ್ಯತೆಯಿಂದ ರಫ್ತು ಮಾಡಲು ಸಾಕಷ್ಟು ಸಕ್ಕರೆ ಮಿಗತೆಯಾಗಲಿದೆಯೆನ್ನಲಾಗಿದೆ.